# ಕರ್ನಾಟಕ ವಿಧಾನ ಪರಿಷತ್ತು.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ : 550
2. ಸದಸ್ಯರ ಹೆಸರು : ಡಾ: ವೈ. ಎ. ನಾರಾಯಣಸ್ವಾಮಿ
3. ಉತ್ತರಿಸಬೇಕಾದ ದಿನಾಂಕ : 21-12-2018.
4. ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ ಸ್ಥಾಪನೆಯಾಗಿದ್ದು, ಯಾವಾಗ; ಸ್ಥಾಪನೆಯ ಉದ್ದೇಶವೇನು? (ಆದೇಶದ ಪ್ರತಿ ನೀಡುವುದು) | ಬೆಂಗಳೂರು ಮೆಟ್ರೋ ರೈಲ್ ನಿಗಮ ನಿಯಮಿತವು, ಕಂಪನಿಗಳ ಕಾಯ್ದೆ, 1956ರ ಅಡಿಯಲ್ಲಿ ನೋಂದಣಿಗೊಂಡ ಕಂಪನಿಯಾಗಿದೆ. ನಿಗಮವು, ಕರ್ನಾಟಕ ಸರ್ಕಾರ ಹಾಗೂ ಭಾರತ ಸರ್ಕಾರದ ಜಂಟಿ ಉದ್ಯಮವಾಗಿದ್ದು, ಬೆಂಗಳೂರು ಮೆಟ್ರೋ ರೈಲ್ ಯೋಜನೆಯನ್ನು ಅನುಷ್ಠಾನಗೊಳಿಸಲು ಸ್ಥಾಪಿಸಿದ ವಿಶೇಷ ಉದ್ಧೇಶಿತ ವಾಹಕವಾಗಿರುತ್ತದೆ. ದಿನಾಂಕ:21.09.1994 ರಂದು ಕಂಪನಿಗಳ ಕಾಯ್ದೆ, 1956ರ ಅಡಿಯಲ್ಲಿ 'Bangalore Mass Rapid Transit Limited (BMRTL)' ಎಂಬ ಹೆಸರಿನಿಂದ ಸ್ಥಾಪಿತವಾದ ಕಂಪನಿಯ ಹೆಸರನ್ನು, ದಿನಾಂಕ:12.09.2005 ರಂದು 'Bangalore Metro Rail Corporation Limited (BMRCL)' ಎಂಬ ಹೆಸರಿಗೆ ಬದಲಾಯಿಸಿ ಸಂಘಟಿಸಲಾಗಿದ್ದು, ಭಾರತ ಸರ್ಕಾರದ ಮತ್ತು ಕರ್ನಾಟಕ ಸರ್ಕಾರದ ಸಮಾನ ಷೇರುದಾರಿಕೆಯೊಂದಿಗೆ ಜಂಟಿ ಉದ್ಯಮವಾಗಿ, ಬೆಂಗಳೂರು ಮೆಟ್ರೋ ರೈಲ್ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ಬೆಂಗಳೂರು ನಗರ ಸಾರಿಗೆ ಅಗತ್ಯತೆಗಳನ್ನು ಪೂರೈಸಲು, ಬೆಂಗಳೂರಿನ ಸುತ್ತಮುತ್ತ, ವರ್ತುಲ ಅಥವಾ ಇತರ ರೀತಿಯ ರೈಲು ಮಾರ್ಗಗಳ ನಿರ್ಮಾಣದ ಮೂಲಕ ತ್ವರಿತ ರೈಲ್ವೇ ಸಾರಿಗೆ ವ್ಯವಸ್ಥೆಯನ್ನು ಸ್ಥಾಪಿಸುವುದು, ನಿರ್ವಹಿಸುವುದು ಕಂಪನಿಯ ಪ್ರಾಥಮಿಕ ಉದ್ಧೇಶವಾಗಿದೆ. ಭಾರತ ಸರ್ಕಾರ, ಕರ್ನಾಟಕ ಸರ್ಕಾರ ಮತ್ತು ಬೆಂಗಳೂರು ಮೆಟ್ರೋ ರೈಲ್ ಯೋಜನೆಯನ್ನು ಅನುಷ್ಠಾನಗೊಳಿಸಲು ವಿಶೇಷ ಉದ್ಧೇಶಿತ ವಾಹಕವಾಗಿ ಸ್ಥಾಪಿತವಾಗಿರುವ ಬಿಎಂಆರ್‌ಸಿಎಲ್ ನಡುವಿನ ಮೆಮೊರ್‍ಯಾಂಡಮ್ ಆಫ್ ಅಂಡರ್‌ಸ್ಟ್ಯಾಂಡಿಂಗ್‌ನ ಅನ್ವಯ, ಈ ಯೋಜನೆಯನ್ನು ಸೆಂಟ್ರಲ್ ಸೆಕ್ಟರ್ ಯೋಜನೆಯಾಗಿ, ಬಿಎಂಆರ್‌ಸಿಎಲ್ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. |
| ಆ) | ಬಿ.ಎಂ.ಆರ್.ಸಿ.ಎಲ್. ವತಿಯಿಂದ ನಿರ್ಮಾಣ ಮಾಡಲು ಉದ್ದೇಶಿಸಿರುವ ಮಾರ್ಗಗಳೆಷ್ಟು; ಆ ಮಾರ್ಗಗಳ ತಹಲ್‌ವರೆಗಿನ ಸ್ಥಿತಿಗತಿ/ ಖರ್ಚು/ ಸಂಪನ್ಮೂಲದ ಕ್ರೋಢಿಕರಣದ ಮಾಹಿತಿ ಒದಗಿಸುವುದು; | ಬೆಂಗಳೂರು ಮೆಟ್ರೋ ರೈಲು ನಿಗಮದ ವತಿಯಿಂದ ನಿರ್ಮಿಸಲಾದ ಮಾರ್ಗಗಳ ವಿವರವನ್ನು **ಅನುಬಂಧ-1** ರಲ್ಲಿ ಲಗತ್ತಿಸಲಾಗಿದೆ. |

| | | |
|---|---|---|
| ಇ) | ಬಿ.ಎಂ.ಆರ್.ಸಿ.ಎಲ್. ವತಿಯಿಂದ ಕಾಮಗಾರಿಯು ಪೂರ್ಣಗೊಂಡು ಕಾರ್ಯಚರಣೆಯಲ್ಲಿರುವ ಮಾರ್ಗಗಳೆಷ್ಟು; ಪ್ರತಿ ದಿನ ಸಂಚರಿಸುತ್ತಿರುವ ಪ್ರಯಾಣಿಕರೆಷ್ಟು/ ಬರುತ್ತಿರುವ ಆದಾಯವೆಷ್ಟು; ಯಾವ ಮೂಲಗಳಿಂದ ಬರುತ್ತಿದೆ; (ಪ್ರತಿ ಮಾರ್ಗನುಸಾರ ವಿವರ ನೀಡುವುದು). | ಬೆಂಗಳೂರು ಮೆಟ್ರೋ ರೈಲು ನಿಗಮದ ವತಿಯಿಂದ ಕಾಮಗಾರಿಯು ಪೂರ್ಣಗೊಂಡು ಕಾರ್ಯಚರಣೆಯಲ್ಲಿರುವ ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ:<br>➢ ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-1ರ ನಾಲ್ಕು ಮಾರ್ಗಗಳಲ್ಲಿ ಬೈಯಪ್ಪನಹಳ್ಳಿಯಿಂದ ಮೈಸೂರು ರಸ್ತೆ ಹಾಗೂ ನಾಗಸಂದ್ರದಿಂದ ಯೆಲಚೇನಹಳ್ಳಿವರೆಗೂ ಮೆಟ್ರೋ ಕಾರ್ಯಚರಣೆಯಲ್ಲಿದ್ದು, ಪ್ರತಿ ದಿನ ಸರಾಸರಿ 3.75 ಲಕ್ಷ ಪ್ರಯಾಣಿಕರು ಪ್ರಯಾಣಿಸುತ್ತಿದ್ದಾರೆ.<br>➢ ಪ್ರತಿ ದಿನ ಸರಾಸರಿ 1.00 ಕೋಟಿ ಆದಾಯವಿರುತ್ತದೆ. ಸದರಿ ಆದಾಯವು ಕೌಂಟರ್ ಸಂಗ್ರಹ ಹಾಗೂ ಸ್ಮಾರ್ಟ್ ಕಾರ್ಡ್‌ಗಳ ಬಳಕೆಯಿಂದ ಬರುತ್ತದೆ. |
| ಈ) | ಸದರಿ ಮಾರ್ಗಗಳಲ್ಲಿ ಬರುವ ನಿಲ್ದಾಣಗಳೆಷ್ಟು ಹಾಗೂ ನಿಲ್ದಾಣಗಳಲ್ಲಿ ಸಾರ್ವಜನಿಕರ ವಾಹನ ನಿಲುಗಡೆಗೆ ಮಾಡಿರುವ ವ್ಯವಸ್ಥೆ ಏನು; (ಮಾರ್ಗವಾರು ಸಂಪೂರ್ಣ ಮಾಹಿತಿ ನೀಡುವುದು). | ಸದರಿ ಮೆಟ್ರೋ ರೈಲು ಮಾರ್ಗಗಳಲ್ಲಿ 40 ನಿಲ್ದಾಣಗಳಿದ್ದು, ಈ ಪೈಕಿ 19 ನಿಲ್ದಾಣಗಳಲ್ಲಿ ವಾಹನ ನಿಲುಗಡೆ ವ್ಯವಸ್ಥೆ ಮಾಡಲಾಗಿದೆ. **ಅನುಬಂಧ-2** ರಲ್ಲಿ ಸಂಪೂರ್ಣ ವಿವರ ಲಗತ್ತಿಸಲಾಗಿದೆ. |
| ಉ) | ಈ ನಿಲ್ದಾಣಗಳಲ್ಲಿ ವಿಧಿಸಿರುವ ವಾಹನ ನಿಲುಗಡೆ ಶುಲ್ಕವು ಮೆಟ್ರೋವಿನಲ್ಲಿನ ಪ್ರಯಾಣದ ಶುಲ್ಕಕ್ಕಿಂತ ಹಾಗೂ ಬೇರೆ ರಾಜ್ಯಗಳಲ್ಲಿ ವಿಧಿಸುತ್ತಿರುವ ವಾಹನ ನಿಲುಗಡೆ ಶುಲ್ಕಕ್ಕಿಂತ ದುಬಾರಿಯಾಗಿರುವುದರಿಂದ, ಸಾರ್ವಜನಿಕರು ಮೆಟ್ರೋವಿನಲ್ಲಿ ಪ್ರಯಾಣ ಮಾಡಲು ಹಿಂಜರಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದರ ಬಗ್ಗೆ ಸರ್ಕಾರದ ನಿಲುವೇನು? (ಇದರಿಂದ ಬರುವಆದಾಯದ ಮಾಹಿತಿ ನೀಡುವುದು). | ಬೆಂಗಳೂರು ಮೆಟ್ರೋ ರೈಲು ನಿಲ್ದಾಣಗಳ ವಾಹನಗಳ ನಿಲುಗಡೆ ಜಾಗದಲ್ಲಿ ವಿಧಿಸುತ್ತಿರುವ ಪ್ರತಿ ಗಂಟೆಗೆ ಸರಾಸರಿ (ಬೆಳಗ್ಗೆ 5.30ರಿಂದ ರಾತ್ರಿ 11.30ರ ವರೆಗೆ) ವಾಹನ ನಿಲುಗಡೆ ಶುಲ್ಕವು ಇತರೆ ಇಲಾಖೆಗಳಾದ ಬಿಎಂಟಿಸಿ, ಕೆಎಸ್ಆರ್‌ಟಿಸಿ, ರೈಲ್ವೆ ಇಲಾಖೆಗಳು, ಹಾಗೂ ಇತರೆ ಮೆಟ್ರೋಗಳಾದ ದೆಹಲಿ, ಚೆನ್ನೈ, ಕೊಚ್ಚಿ ಹೋಲಿಸಿದರೆ ನಮ್ಮ ಮೆಟ್ರೋವಿನ ದರ ಕಡಿಮೆಯಾಗಿರುತ್ತದೆ. **ಅನುಬಂಧ-3**ರಲ್ಲಿ ಇದರ ವಿವರಗಳನ್ನು ಲಗತ್ತಿಸಲಾಗಿದೆ.<br><br>ವಾಹನಗಳ ನಿಲುಗಡೆಯಿಂದ ಬಂದಿರುವ ಆದಾಯದ ವಿವರಗಳನ್ನು **ಅನುಬಂಧ-4** ರಲ್ಲಿ ಲಗತ್ತಿಸಿದೆ.<br><br>ಪ್ರಸ್ತುತ ಮೆಟ್ರೋ ರೈಲಿನಲ್ಲಿ ಪ್ರತಿನಿತ್ಯ ಸರಾಸರಿ 3.75 ಲಕ್ಷ ಪ್ರಯಾಣಿಕರು ಪ್ರಯಾಣಿಸುತ್ತಿದ್ದು, ಪ್ರಯಾಣಿಸುವವರ ಸಂಖ್ಯೆ ಕ್ರಮೇಣ ಹೆಚ್ಚಾಗುತ್ತಿದೆ.<br><br>ಮೆಟ್ರೋ ಪ್ರಯಾಣಿಕರ ಸಂಖ್ಯೆಯನ್ನು ಹೆಚ್ಚಿಸುವುದಕ್ಕಾಗಿ, ಫೀಡರ್ ಮತ್ತು ನಿಯಮಿತ ಬಸ್ ಸೇವೆಗಳ ಮೂಲಕ ಕೊನೆಯ ಮೈಲಿ ಸಂಪರ್ಕವನ್ನು ಸುಧಾರಿಸಲು ಬೆಂಗಳೂರು ಮೆಟ್ರೋ ರೈಲು ನಿಗಮವು ಬಿಎಂಟಿಸಿ ಜೊತೆ ಸಮನ್ವಯ ಸಾಧಿಸುತ್ತಿದೆ. |

ನಅಇ 425 ಪಿಆರ್‌ಜೆ 2018

( ಜಿ. ಪರಮೇಶ್ವರ )
ಉಪ ಮುಖ್ಯಮಂತ್ರಿಗಳು

ಅನುಬಂಧ-1

## ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

ಬೆಂಗಳೂರು ಮೆಟ್ರೋ ರೈಲು ಯೋಜನೆ ನಿಗಮದಿಂದ ನಿರ್ಮಾಣ ಮಾಡಲು ಉದ್ದೇಶಿಸಿರುವ ಮಾರ್ಗಗಳು:

**ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-1:** 42.3 ಉದ್ದದ ಮಾರ್ಗವು ಎರಡು ಕಾರಿಡಾರ್‌ಗಳನ್ನು ಒಳಗೊಂಡಿರುತ್ತದೆ.

ಪೂರ್ವ-ಪಶ್ಚಿಮ ಕಾರಿಡಾರ್ (ಬೈಯಪ್ಪನಹಳ್ಳಿಯಿಂದ ಮೈಸೂರು ರಸ್ತೆವರೆಗೆ) ಉದ್ದ 18.1 ಕಿ.ಮೀಗಳು.
ಉತ್ತರ-ದಕ್ಷಿಣ ಕಾರಿಡಾರ್ (ನಾಗಸಂದ್ರದಿಂದ ಯೆಲಚೇನಹಳ್ಳಿವರೆಗೆ) ಉದ್ದ 24.2 ಕಿ.ಮೀಗಳು.
ಸದರಿ ಯೋಜನೆಗೆ ರೂ.13845.01 ಕೋಟಿಗಳು ಖರ್ಚಾಗಿರುತ್ತದೆ. ಪ್ರಸ್ತುತ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡು ಜೂನ್-2017 ರಂದು ಸಾರ್ವಜನಿಕರ ವಾಣಿಜ್ಯ ಸೇವೆಗೆ ಮುಕ್ತಗೊಳಿಸಲಾಯಿತು. ಸದರಿ ಯೋಜನೆಗೆ ಕೇಂದ್ರ ಸರ್ಕಾರದಿಂದ ರೂ. 3073.2 ಕೋಟಿಗಳು ಮತ್ತು ರಾಜ್ಯ ಸರ್ಕಾರದಿಂದ ರೂ. 5060.82 ಕೋಟಿಗಳು ಬಿಡುಗಡೆಯಾಗಿರುತ್ತದೆ. ಬಾಕಿ ಉಳಿದ ರೂ. 5046.16 ಕೋಟಿಗಳನ್ನು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳು, ಸ್ಥಳೀಯ ಹಣಕಾಸ ಸಂಸ್ಥೆಗಳಿಂದ ಕ್ರೋಢೀಕರಿಸಲಾಗಿದೆ.

**ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-2:** ಈ ಯೋಜನೆಯಲ್ಲಿ ಹಂತ-1ರ ನಾಲ್ಕು ವಿಸ್ತರಣೆ ಹಾಗೂ ಎರಡು ಹೊಸ ಮಾರ್ಗಗಳನ್ನು ಒಳಗೊಂಡಿರುತ್ತದೆ.

- ರೀಚ್-1ರ ವಿಸ್ತರಣೆ: ಬೈಯ್ಯಪ್ಪನಹಳ್ಳಿಯಿಂದ ವೈಟ್‌ಫೀಲ್ಡ್‌ವರೆಗೆ 15.500 ಕಿ.ಮೀ.ಗಳು.
- ರೀಚ್-2ರ ವಿಸ್ತರಣೆ: ಮೈಸೂರುರಸ್ತೆಯಿಂದ ಕೆಂಗೇರಿವರೆಗೆ 6.465 ಕಿ.ಮೀ.ಗಳು.
- ರೀಚ್-3 ವಿಸ್ತರಣೆ: ನಾಗಸಂದ್ರದಿಂದ ಬಿ.ಐ.ಇ.ಸಿ.ವರೆಗೆ 3.770 ಕಿ.ಮೀ.ಗಳು.
- ರೀಚ್-4 ವಿಸ್ತರಣೆ: ಪುಟ್ಟೇನಹಳ್ಳಿಯಿಂದ ಅಂಜನಾಪುರ ಟೌನ್‌ಶಿಪ್‌ವರೆಗೆ 6.290 ಕಿ.ಮೀ.ಗಳು.
- ರೀಚ್-5 ಹೊಸ ಮಾರ್ಗ: ಆರ್.ವಿ. ರಸ್ತೆಯಿಂದ ಬೊಮ್ಮಸಂದ್ರವರೆಗೆ 18.820 ಕಿ.ಮೀ.ಗಳು.
- ರೀಚ್-6 (ಎಲಿವೇಟೆಡ್): ಗೊಟ್ಟಿಗೆರೆಯಿಂದ ಡೈರಿಸರ್ಕಲ್‌ವರೆಗೆ 7.250 ಕಿ.ಮೀ.ಗಳು.
- ರೀಚ್-6 (ಸುರಂಗಮಾರ್ಗ): ಡೈರಿಸರ್ಕಲ್‌ನಿಂದ ನಾಗವಾರದವರೆಗೆ 14.7 ಕಿ.ಮೀ.ಗಳು.

ಒಟ್ಟು 72.095 ಉದ್ದದ ಮಾರ್ಗವನ್ನು ಹೊಂದಿದ್ದು, ಇದರ ಅಂದಾಜು ವೆಚ್ಚ ರೂ.26405.14 ಕೋಟಿಗಳಾಗಿರುತ್ತದೆ. ಪ್ರಸ್ತುತ ಸುರಂಗಮಾರ್ಗದ ಕಾಮಗಾರಿಯನ್ನು ಒರತುಪಡಿಸಿ ಎಲ್ಲಾ ಕಾಮಗಾರಿಯು ಪ್ರಗತಿಯಲ್ಲಿದ್ದು, ನವೆಂಬರ್ ಅಂತ್ಯದ ವರೆಗೆ ರೂ. 6,958.71 ಕೋಟಿಗಳು ಖರ್ಚಾಗಿರುತ್ತದೆ. ಸದರಿ ಯೋಜನೆಗೆ, ಕೇಂದ್ರ ಸರ್ಕಾರವು ರೂ. 2529.80 ಕೋಟಿಗಳನ್ನು ಮತ್ತು ರಾಜ್ಯ ಸರ್ಕಾರವು ರೂ. 5985.50 ಕೋಟಿಗಳನ್ನು ಬಿಡುಗಡೆಮಾಡಿರುತ್ತದೆ. ಇತರೆ ಹಣಕಾಸು ಸಂಸ್ಥೆಗಳಿಂದ ರೂ.608.15 ಕೋಟಿಗಳನ್ನು ಕ್ರೋಢೀಕರಿಸಲಾಗಿದೆ.

**ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-2ಎ & ಹಂತ-2ಬಿ:**
ಕರ್ನಾಟಕ ಸರ್ಕಾರವು ಹಂತ-2ಎ ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಕೆ.ಆರ್. ಪುರಂವರೆಗೆ (ಹೊರವರ್ತುಲ ಮಾರ್ಗದಲ್ಲಿ) ಹೊಸ ಮೆಟ್ರೋ ಮಾರ್ಗ 17 ಕಿ.ಮೀ. ಉದ್ದವಿದ್ದು ಹಾಗೂ ಹಂತ-2ಬಿ ನಾಗವಾರ ಮೆಟ್ರೋ ನಿಲ್ದಾಣದಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ 29.062 ಕಿ.ಮೀ.ಗಳ ಉದ್ದದ ಕಾಮಗಾರಿಗಳಿಗೆ ಅನುಮೋದನೆಯನ್ನು ನೀಡಲಾಗಿದೆ. ಪ್ರಸ್ತುತ ವ್ಯಾಪ್ತಿಯ ಪರಿಷ್ಕರಣೆ, ಮಾರ್ಗ ಜೋಡಣೆ, ಅಂದಾಜು ವೆಚ್ಚ ಹಾಗೂ ಪರಿಷ್ಕೃತ ಹಣಕಾಸು ಯೋಜನೆಗಳ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು
ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

ಅನುಬಂಧ-2

## ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

### ಮೆಟ್ರೋ ನಿಲ್ದಾಣಗಳಲ್ಲಿ ವಾಹನ ನಿಲುಗಡೆಗೆ ಸ್ಥಳಾವಕಾಶದ ವಿವರ:

| ಕ್ರ.ಸಂ | ನಿಲ್ದಾಣಗಳ ಹೆಸರು | ದ್ವಿಚಕ್ರ ವಾಹನಗಳ ನಿಲುಗಡೆಗೆ ಸ್ಥಳಗಳ ಸಂಖ್ಯೆ | ನಾಲ್ಕು ಚಕ್ರಗಳ ವಾಹನಗಳ ನಿಲುಗಡೆಗೆ ಸ್ಥಳಗಳ ಸಂಖ್ಯೆ | ಸೈಕಲ್ ನಿಲುಗಡೆಗೆ ಸ್ಥಳ | ನಿಲುಗಡೆಯ ಸಮಯ |
|---|---|---|---|---|---|
| ನೇರಳೆ ಮಾರ್ಗ | | | | | |
| 1 | ಬೈಯಪ್ಪನಹಳ್ಳಿ (ಆರ್.ಎಸ್.ಆರ್ ಕಡೆ) | 650 | 300 | ಕನಿಷ್ಟ 10 | ಬೆಳಿಗ್ಗೆ 05.00 ರಿಂದ ರಾತ್ರಿ 11.30ರವರೆಗೆ. |
| | ಬೈಯಪ್ಪನಹಳ್ಳಿ (ಒ.ಎಂ.ಆರ್ ಕಡೆ) | 215 | 72 | ಕನಿಷ್ಟ 10 | |
| 2 | ಎಸ್ ವಿ ರಸ್ತೆ | 230 | 184 | ಕನಿಷ್ಟ 10 | |
| 3 | ಇಂದ್ರಾನಗರ | 155 | 0 | ಕನಿಷ್ಟ 10 | |
| 4 | ಮಾಗಡಿ ರಸ್ತೆ | 140 | 47 | ಕನಿಷ್ಟ 10 | |
| 5 | ಬಾಲಗಂಗಾಧರನಾಥ ಸ್ವಾಮಿ ನಿಲ್ದಾಣ, ಹೊಸಹಳ್ಳಿ | 186 | 0 | ಕನಿಷ್ಟ 10 | |
| 6 | ಅತ್ತಿಗುಪ್ಪೆ | 185 | 0 | ಕನಿಷ್ಟ 10 | |
| 7 | ಮೈಸೂರು ರಸ್ತೆ (ಆರ್.ಎಸ್.ಎಸ್ ಕಡೆ) | 335 | 125 | ಕನಿಷ್ಟ 10 | |
| | ಮೈಸೂರು ರಸ್ತೆ | 1500 | 240 | ಕನಿಷ್ಟ 10 | |
| ಹಸಿರು ಮಾರ್ಗ | | | | | |
| 1 | ನಾಗಸಂದ್ರ | 110 | 145 | ಕನಿಷ್ಟ 10 | ಬೆಳಿಗ್ಗೆ 05.00 ರಿಂದ ರಾತ್ರಿ 11.30ರವರೆಗೆ. |
| 2 | ದಾ ಸರಹಳ್ಳಿ | 146 | 0 | ಕನಿಷ್ಟ 10 | |
| 3 | ಜಾಲಹಳ್ಳಿ | 120 | 52 | ಕನಿಷ್ಟ 10 | |
| 4 | ಪೀಣ್ಯ ಕೈಗಾರಿಕ ಪ್ರದೇಶ | 380 | 83 | ಕನಿಷ್ಟ 10 | |
| 5 | ಪೀಣ್ಯ | 126 | 36 | ಕನಿಷ್ಟ 10 | |
| 6 | ಮಹಾಲಕ್ಷ್ಮಿ | 755 | 82 | ಕನಿಷ್ಟ 10 | |
| 7 | ರಾಜಾಜಿನಗರ | 165 | 19 | ಕನಿಷ್ಟ 10 | |
| 8 | ನ್ಯಾಷನಲ್ ಕಾಲೇಜ್ | 452 | 54 | ಕನಿಷ್ಟ 10 | |
| 9 | ಜಯನಗರ | 360 | 0 | ಕನಿಷ್ಟ 10 | |
| 10 | ಬನಶಂಕರಿ | 360 | 61 | ಕನಿಷ್ಟ 10 | |
| 11 | ಜೆ.ಪಿ.ನಗರ | 182 | 0 | ಕನಿಷ್ಟ 10 | |
| 12 | ಯಲಚೇನಹಳ್ಳಿ | 600 | 32 | ಕನಿಷ್ಟ 10 | |
| ಒಟ್ಟು ವಾಹನಗಳ ಸಂಖ್ಯೆ: | | 7,352 | 1532 | | |

ಉಪ ಪ್ರಧಾನ ವ್ಯವಸ್ಥಾಪಕರು (ತೆರಿಗೆ & ಸಂಪನ್ಮೂಲ)
ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

ಅನುಬಂಧ-3

# Comparative Statement of Parking Charges of Namma Metro with the KSRTC, BMTC, Indian Railway and other Metro Stations

| Vehicle catogery Timings | Parking Fee of NAMMA METRO | | | | Parking Fee of KSRTC | | | |
|---|---|---|---|---|---|---|---|---|
| | For the first four hours or part thereof (Rs.) | For every subsequent hour or part thereof (Rs.) | Parking Charges for the day (Rs.) from 05:30hrs to 23:30hrs | Average Parking charges per hour (for Revenue hours) (Rs.) | 0-4 Hrs (Rs.) | For every subsequent hour or part thereof (Rs.) | 24 Hrs (Rs.) | Average Parking charges per hour (for Revenue 24 hours) (Rs.) |
| Cars /Jeep | 30 | 10 | 60 | 3.33 | 50 | 10 | 250 | 10.42 |
| Motor Cycles /Two wheelers | 15 | 5 | 30 | 1.67 | 10 | 5 | 60 | 2.50 |
| LCVs | 75 | 25 | 150 | 8.33 | - | - | - | |
| Bicycles | Rs. 1/- per hour ssubject to a maximum of Rs. 10/- per day. | | | 0.56 | - | - | - | |

| Vehicle catogery Timings | Parking Fee of Indian Railway | | | | | | Parking Fee of BMTC | | | | |
|---|---|---|---|---|---|---|---|---|---|---|---|
| | 0 to 2Hrs (Rs.) | 2 to 4 Hrs (Rs.) | 4 to 10 Hrs (Rs.) | 10 to 16 Hrs (Rs.) | 16 to 24 Hrs (Rs.) | Average Parking charges per hour (for Revenue hours) (Rs.) | 0-1 Hrs (Rs.) | For every subsequent hour or part thereof (Rs.) | upto 12 Hrs (Rs.) | 12-24 Hrs (Rs.) | Average Parking charges per hour (for Revenue hours) (Rs.) |
| Cars /Jeep | 20 | - | - | - | 300 | 12.50 | 20 | 10 | 120 | 160 | 6.67 |
| Motor Cycles /Two wheelers | 10 | 20 | 30 | 40 | 50 | 2.08 | 10 | 5 | 60 | 100 | 4.17 |
| LCVs | - | - | - | - | - | | - | - | - | | |
| Bicycles | 5 | 10 | 15 | 20 | 25 | 1.04 | - | - | | | |

[signature] 16/1/12

T. [illegible]
Deputy [illegible]
(Taxation & Resources)
Bangalore Metro Rail Corporation
3rd Floor, BMTC Complex, K.H. Road,
Shanthi Nagar, Bangalore - 560 027

(4)

## Comparative Statement of Parking Charges of Namma Metro with the KSRTC, BMTC, Indian Railway and other Metro Stations

| Vehicle catogery Timings | Parking Fee of NAMMA METRO | | | | Parking Fee of DELHI METRO | | | |
|---|---|---|---|---|---|---|---|---|
| | For the first four hours or part thereof. (Rs.) | For every subsequent hour or part thereof (Rs.) | Parking Charges for the day (Rs.) from 05:30hrs to 23:30hrs | Average Parking charges per hour (for Revenue hours) (Rs.) | upto 6 Hrs (Rs.) | | More than 12hrs upto 24hrs (Rs.) | Average Parking charges per hour (for Revenue hours) (Rs.) |
| Cars /Jeep | 30 | 10 | 60 | 3.33 | 30 | 50 | 60 | 3.33 |
| Motor Cycles /Two wheelers | 15 | 5 | 30 | 1.67 | 15 | 25 | 30 | 1.67 |
| LCVs | 75 | 25 | 150 | 8.33 | - | - | | - |
| Bicycles | Rs. 1/- per hour ssubject to a maximum of Rs. 10/- per day. | | | 0.56 | 5 | - | 10 | 0.56 |

| Vehicle catogery Timings | Parking Fee of KOCHI METRO | | | | Parking Fee of CHENNAI METRO | | | | |
|---|---|---|---|---|---|---|---|---|---|
| | 0-2 Hrs (Rs.) | beyond 2 for Every Hrs (Rs.) | Daily parking passes (Service hours) (Rs.) | Average Parking charges per hour (for Revenue hours) (Rs.) | 0-6 Hrs (Rs.) | 06-12Hrs (Rs.) | More than 12 Hrs (Rs.) | Beyond Service Hrs (24 hrs) (Rs.) | Average Parking charges per hour (for Revenue hours) (Rs.) |
| Cars /Jeep | 25 | 10 | 80 | 3.33 | 20 | 30 | 40 | 100 | 5.56 |
| Motor Cycles /Two wheelers | 10 | 5 | 80 | 3.33 | 10 | 15 | 20 | 50 | 2.78 |
| LCVs | - | - | - | | - | - | - | - | |
| Bicycles | - | - | - | | - | - | - | - | |

THONTADARYA
Deputy General Manager - Finance
(Taxation & Resources)
Bangalore Metro Rail Corporation
3rd Floor, BMTC Complex, K.H. Road,
Shanthi Nagar, Bangalore - 560 027

(4)

ಅನುಬಂಧ-4

# Paking Revenue

| BMRCL Parking Revenue For F Y - 2017-18 | |
|---|---|
| Parking | |
| Month | Revenue in (Rs) |
| Apr-17 | 16,33,859.00 |
| May-17 | 20,41,462.00 |
| Jun-17 | 21,30,039.00 |
| Jul-17 | 21,35,211.00 |
| Aug-17 | 28,57,726.00 |
| Sep-17 | 40,18,269.00 |
| Oct-17 | 42,83,222.00 |
| Nov-17 | 44,30,871.00 |
| Dec-17 | 45,99,131.00 |
| Jan-18 | 44,51,689.00 |
| Feb-18 | 43,46,449.00 |
| Mar-18 | 39,80,615.00 |
| **Total** | **4,09,08,543.00** |

| BMRCL Parking Revenue For F Y - 2018-19 Till (Nov-18) | |
|---|---|
| Parking | |
| Month | Revenue in (Rs) |
| Apr-18 | 32,69,590.00 |
| May-18 | 34,12,489.00 |
| Jun-18 | 40,03,742.00 |
| Jul-18 | 39,39,122.00 |
| Aug-18 | 32,12,066.00 |
| Sep-18 | 58,53,727.00 |
| Oct-18 | 51,06,872.00 |
| Nov-18 | 82,18,407.00 |
| **Total** | **3,70,16,015.00** |

| Average per month revenue For the F Y - 2017-18 |
|---|
| 34,09,045.00 |
| **Say : 34 Lakhs Per Month** |

| Average per month revenue For the F Y - 2018-19 |
|---|
| 46,27,002.00 |
| **Say : 46 Lakhs Per Month** |

THONTADARYA 11/12/2018
Deputy General Manager - Finance
(Taxation & Resources)
**Bangalore Metro Rail Corporation**
3rd Floor, BMTC Complex, K.H. Road,
Shanthi Nagar, Bangalore - 560 027

೭